ಹಿಂದುಳಿದ ವಿದ್ಯಾರ್ಥಿಗಳಿಗೆ ವಸತಿ ಶಾಲೆಗಳು.

1554 - ಶ್ರೀ ಯು.ಬಿ. ಬಣಕಾರ್ (ಹಿರೇಕೆರೂರು) : ಮಾನ್ಯ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಹಿಂದುಳಿದ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ರಾಜ್ಯದಲ್ಲಿ ಪ್ರಾರಂಭಿಸಿದ ವಸತಿಶಾಲೆಗಳು ಎಷ್ಟು?*

ಆ) *1997-98ನೇ ಸಾಲಿನಲ್ಲಿ ಎಷ್ಟು ಶಾಲೆಗಳನ್ನು ತೆರೆಯಲು ಉದ್ದೇಶಿಸಲಾಗಿದೆ?*

ಇ) *ಈಶಾಲೆಯಲ್ಲಿ ಹಿರೇಕೆರೂರು ವಿಧಾನಸಭಾ ಕ್ಷೇತ್ರದಲ್ಲಿ ಒಂದು ವಸತಿಶಾಲೆಯನ್ನು ತೆರೆಯಲಾಗುವುದೇ?*

ಶ್ರೀ ಮಾಲೀಕಯ್ಯ ವಿ. ಗುತ್ತೇದಾರ್ (ಹಿಂದುಳಿದ ವರ್ಗಗಳ ಮತ್ತು ಅಲ್ಪ ಸಂಖ್ಯಾತರ ಇಲಾಖೆ ಸಚಿವರು)

ಅ) ರಾಜ್ಯದಲ್ಲಿ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಈವರೆಗೆ 20 ವಸತಿಶಾಲೆಗಳು ಮಂಜೂರಾಗಿದ್ದು ಇವುಗಳಲ್ಲಿ 12 ವಸತಿಶಾಲೆಗಳನ್ನು ಪ್ರಾರಂಭಿಸಲಾಗಿದೆ.

ಆ) ಪ್ರಸಕ್ತ ಸಾಲಿನಲ್ಲಿ ಹೊಸದಾಗಿ ವಸತಿಶಾಲೆಗಳನ್ನು ತೆರೆಯಲು ಉದ್ದೇಶಿಸಲಾಗಿರುವುದಿಲ್ಲ.

ಇ) -ಇಲ್ಲ-

ಸರ್ಕಾರದಿಂದ ಮಾನ್ಯತೆ ಪಡೆದ ಗಣಿಗಾರಿಕಾ ಕೇಂದ್ರಗಳು.

1555 - ಶ್ರೀ ಹೆಚ್. ಡಿ.ಬಸವರಾಜು (ವಿರಾಜಪೇಟೆ) : ಮಾನ್ಯ ಗಣಿ ಮತ್ತು ಭೂವಿಜ್ಞಾನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಗಣಿಗಾರಿಕೆಗಾಗಿ ಈ ಸರ್ಕಾರವು 1994-95, 1995-96, 1996-97, ಈ ಸಾಲಿನಲ್ಲಿ ಎಷ್ಟು ಸಂಸ್ಥೆ ಜನರಿಗೆ ಪರವಾನಗಿ ನೀಡಿರುತ್ತಾರೆ. ಅವು ಯಾವ್ಯಾವುದು ವಿವರ ನೀಡುವುದು?*

ಆ) *ರಾಜ್ಯದಲ್ಲಿ ಸರ್ಕಾರದಿಂದ ಈವರೆವಿಗೆ ಮಾನ್ಯತೆ ಪಡೆದ ಗಣಿಗಾರಿಕಾ ಕೇಂದ್ರಗಳು ಯಾವ್ಯಾವುದು ಅವುಗಳ ವಿವರ ನೀಡುವುದು?*

ಇ) *ಗಣಿಗಾರಿಕೆಯಿಂದ 1994-95, 1995-96, 1996-97 ರ ಸಾಲಿನಲ್ಲಿ ಸರ್ಕಾರಕ್ಕೆ ಬಂದ ಆದಾಯವೆಷ್ಟು?*

ಶ್ರೀ ಎಸ್. ಡಿ. ಜಯರಾಮ್ (ಗಣಿ ಮತ್ತು ಭೂವಿಜ್ಞಾನ ಸಚಿವರು) :

ಅ) 1994-95 ರಲ್ಲಿ 17 ಗಣಿ ಗುತ್ತಿಗೆ

1995-96 ರಲ್ಲಿ 20 ಗಣಿ ಗುತ್ತಿಗೆ

1996-97 ರಲ್ಲಿ 14 ಗಣಿ ಗುತ್ತಿಗೆ.

(ಅನುಬಂಧದಲ್ಲಿ ವಿವರಗಳನ್ನು ನೀಡಲಾಗಿದೆ.)

ಆ) ಕೇಂದ್ರ ಸರ್ಕಾರವು ಜಾರಿಗೊಳಿಸಿರುವ ಗಣಿಗಳು ಮತ್ತು ಖನಿಜಗಳು (ವಿನಿಯಮನ ಮತ್ತು ಅಭಿವೃದ್ಧಿ) ಅಧಿನಿಯಮ 1957 ಮತ್ತು ಖನಿಜ ರಿಯಾಯಿತಿ ನಿಯಮಗಳು 1960 ರಲ್ಲಿನ ನಿಯಮಗಳನುಸಾರವಾಗಿ ರಾಜ್ಯ ಸರ್ಕಾರದಿಂದ ಅಸಕ್ತ ವ್ಯಕ್ತಿ : ಸಂಸ್ಥೆಗಳು ಗಣಿಗುತ್ತಿಗೆ ಪಡೆದು ಚಟುವಟಿಕೆಯಲ್ಲಿ ನಿರತವಾಗುತ್ತವೆ. ಆದ್ದರಿಂದ ಮಾನ್ಯತೆ ನೀಡುವ ಪ್ರಶ್ನೆ ಉದ್ಭವಿಸುವುದಿಲ್ಲ, ಅಲ್ಲದೆ ಗಣಿಗಾರರಿಕಾ ಕೇಂದ್ರಗಳು ಯಾವುದೂ ಇರುವುದಿಲ್ಲ.

ಇ) ಗಣಿಗಾರಿಕೆಯಿಂದ ಬಂದಿರುವ ಆದಾಯದ ವಿವರಗಳು ಈ ಕೆಳಕಂಡಂತೆ ಇದೆ.

(ರೂ. ಲಕ್ಷಗಳಲ್ಲಿ)

1994-95	2450.480
1995-96	6216.621
1996-97	4351.060

ANNEXURE TO UNSTARRED L.A. QUESTION NO. 2145 TABLED BY SRI.H.D. BASAVARAJU

1994-95

1.	Smt. Ambamma.N.S.	M.L.2177	White Quartz & Soapstone
2.	Sri.B.Chandrashekar (IV Renewal)	M.L.2178	Moulding sand
3.	Sri H.B.Patil	M.L.2179	Moulding sand
4.	Sri. Laxminarayana Warad	M.L.2180	Moulding sand
5.	Gangadhar Gurubasappa Navadgi	2181	-do-

6.	T.Hanumanthappa	M.L.2182	Moulding sand
7.	P.Abubaker	M.L.2183	Iron Ore
8.	Pundaleeka Rao Bengale	2184	Limestone
9.	M/S Mineral Mines & Traders	M.L.2185	Red-oxide & Iron Ore
10.	B.R. Yogendranath Singh	2186	Iron Ore & Red Oxide
11.	Smt. Kamala Bai (II Renawal)	M.L.2187	Manganese & others
12.	Basappa Pondappa Naik	M.L.2188	Limestone & Quartz
13.	M/S Mysore Minerals Limited	M.L.2188	(A) Kaolin
14.	Smt. Maimunnisa	M.L.2189	Corundum
15.	M/s Rajapur Mines	M.L.2190	Iron Ore
16.	M/s Bharat Gold Mines & Limited	M.L.2191	Gold, Silver
17.	Makthum Tonse	M.L.2192	Limestone

1995-96

1.	M/s Jerald J.F.Lewis	M.L. 2193	Limeshell
2.	M/s Kishanlal	2194	Iron Ore
3.	Sri. Subashchandra Mahantappa Modi	M.L.2195	Limestone
4.	M/s Sree Srinivasa Clays	2196	Clay
5.	M/s Brindavan Granites	2196	Clay
6.	M/s Rohini Mining (P) Limited	2198	Silica Sand

7.	Sri Govind B.Ron	M.L.2199	Moulding Sand
8.	Sri. Govind B.Ron	M.L.2200	Moulding Sand
9.	Sri.Govind B.Ron	M.L.2201	Moulding Sand
10.	M/S Bharat Mineral & Trading Corporation	M.L.2202	Silica Sand

ಗಂಗಾ ಕಲ್ಯಾಣ ಯೋಜನೆ ಕುರಿತು.

1556 - ಶ್ರೀ ಹೆಚ್.ಡಿ. ಬಸವರಾಜ್ (ವಿರಾಜಪೇಟೆ) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *1994-95, 1995-96, 1996-97ರಲ್ಲಿ ಗಂಗಾ ಕಲ್ಯಾಣ ಯೋಜನೆಗಾಗಿ ರಾಜ್ಯದಲ್ಲಿ ಎಷ್ಟು ಹಣ ವೆಚ್ಚ ಮಾಡಲಾಗಿರುತ್ತದೆ ಜಿಲ್ಲಾವಾರು ಅಂಕಿ ಅಂಶ ನೀಡುವುದು?*

ಆ) *ಗಂಗಾ ಕಲ್ಯಾಣ ಯೋಜನೆ ಅನುಷ್ಠಾನದಲ್ಲಿ ಮೇಲಿನ ವರ್ಷಗಳಲ್ಲಿ ಎಷ್ಟು ಫಲಾನುಭವಿಗಳಿಗೆ ಅನುಕೂಲವಾಗಿರುತ್ತದೆ ಮತ್ತು ಎಷ್ಟು ಎಕರೆ ಭೂಮಿಗೆ ನೀರಾವರಿ ಸೌಲಭ್ಯ ದೊರಕುತ್ತದೆ? ಜಿಲ್ಲಾವಾರು ಅಂಕಿಅಂಶ ನೀಡುವುದು.*

ಇ) *ಕೊಡಗು ಜಿಲ್ಲೆಯಲ್ಲಿ ಕಳೆದ ಮೂರು ವರ್ಷಗಳಲ್ಲಿ ಎಷ್ಟು ಫಲಾನುಭವಿಗಳು ಗಂಗಾ ಕಲ್ಯಾಣ ಯೋಜನೆ ಸೌಲಭ್ಯ ಪಡೆದಿರುತ್ತಾರೆ? (ತಾಲ್ಲೂಕುವಾರು ವಿವರ ನೀಡುವುದು)*

ಶ್ರೀ ಕೆ. ಎಂ. ಕೃಷ್ಣರೆಡ್ಡಿ (ಸಮಾಜ ಕಲ್ಯಾಣ ಸಚಿವರು) :

ಅ)

1994-95	ಯೋಜನೆ ಅನುಷ್ಠಾನದಲ್ಲಿ ಇರಲಿಲ್ಲ.
1995-96	ರೂ.2,09,68,792.00
1996-97	ರೂ. 21,11,97,727.00
	(ಜಿಲ್ಲಾವಾರು ವಿವರವನ್ನು ಅನುಬಂಧ-ಅ ನಲ್ಲಿ ನೀಡಲಾಗಿದೆ.)